## 114. ಅನ್ನಾಸ್

ಸೂ. 6 ರು. 1

سُورَةُ النَّاسِ مَكِّيَّةٌ

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ

1. ಹೇಳಿರಿ- ನಾನು ಅಭಯ ಯಾಚಿಸುತ್ತೇನೆ- ಮಾನವರ ಪ್ರಭುವಿನ- قُلْ اَعُوْذُ بِرَبِّ النَّاسِ ﴿١﴾

2. ಮಾನವರ ಸಾಮ್ರಾಟನ- مَلِكِ النَّاسِ ﴿٢﴾

3. ಮಾನವರ ನೈಜ ಆರಾಧ್ಯನ- اِلٰهِ النَّاسِ ﴿٣﴾

4. ಪದೇಪದೇ ಬಂದು ದುಷ್ಪ್ರೇರಣೆ ನೀಡುವವನ ಕೇಡಿನಿಂದ-[1] مِنْ شَرِّ الْوَسْوَاسِ الْخَنَّاسِ ﴿٤﴾

5. ಜನರ ಮನಸ್ಸುಗಳಲ್ಲಿ ದುಷ್ಪ್ರೇರಣೆ ಉಂಟು ಮಾಡುವವನ ಕೇಡಿನಿಂದ- الَّذِىْ يُوَسْوِسُ فِىْ صُدُوْرِ النَّاسِ ﴿٥﴾

6. ಅವನು ಯಕ್ಷಗಳ ಪೈಕಿಯಾಗಿರಲಿ, ಮಾನವರ ಪೈಕಿಯಾಗಿರಲಿ.[2] مِنَ الْجِنَّةِ وَ النَّاسِ ﴿٦﴾

---

1. ಅರ್ಥಾತ್- ಒಮ್ಮೆ ದುಷ್ಪ್ರೇರಣೆ ನೀಡುವಲ್ಲಿ ಸಫಲನಾಗದಿದ್ದರೆ ಸರಿದು ಬಿಡುತ್ತಾನೆ. ಅನಂತರ ಮತ್ತೆ ಬಂದು ದುಷ್ಪ್ರೇರಣೆ ನೀಡತೊಡಗುತ್ತಾನೆ. ಈ ಪ್ರಯತ್ನವನ್ನು ನಿರಂತರ ಜಾರಿಯಲ್ಲಿರಿಸುತ್ತಾನೆ.
2. ಅರ್ಥಾತ್- ದುಷ್ಪ್ರೇರಣೆ ನೀಡುವವರು ಮಾನವರ ಪೈಕಿಯಲ್ಲಾಗಿರಲಿ, ಜಿನ್ನ್‌ಗಳ (ಯಕ್ಷರ) ಪೈಕಿಯಲ್ಲಾಗಿರಲಿ - ಇಬ್ಬರ ಕೇಡಿನಿಂದಲೂ ನಾನು ಅಭಯ ಯಾಚಿಸುತ್ತೇನೆ.